ಪಿ.ಡಬ್ಲು- ೧ ಓ.ಎಸ್.೨೦೦-೨೦೨೧

ದಿ: ೬.೦೧.೨೦೨೪ ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

__**ಪಾಟೀ ಸವಾಲು:**__ ಪ್ರತಿವಾದಿ ಪರವಾಗಿ ಶ್ರೀ ಹೆಚ್.ಎ.ಆರ್. ವಕೀಲರಿಂದ

ನಾನು ಏಳನೇ ತರಗತಿವರೆಗೆ ಓದಿದ್ದೇನೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ೧ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ೨ನೇ ಪ್ರತಿವಾದಿ ನನ್ನ ಅಣ್ಣ ಎಂದರೆ ಸರಿ. ನಾನು ನಂಜನಗೂಡಿನಲ್ಲಿ ವಾಸ ಇದ್ದೇನೆ ಎಂದರೆ ಸರಿ. ನನ್ನ ಮದುವೆ ಆಗಿ ಸುಮಾರು ೨೬ ವರ್ಷಗಳಾಗಿದೆ. ನಾನು ೨೦೦೯ ವರೆಗೆ ನನ್ನ ತಂದೆಯ ಜೊತೆ ವಾಸ ಇದ್ದೇ. ನಂತರ ನಾನು ನಂಜನಗೂಡಿನಲ್ಲಿ ವಾಸಿಸುತ್ತಿದ್ದೇನೆ.

ದಾವಾ ಸ್ವತ್ತು ವ್ಯವಸಾಯದ ಜಮೀನು ಎಂದರೆ ಸರಿ. ದಾವಾ ಆಸ್ತಿ ಚಕ್ಕುಬಂದಿ ಪೂ-ಆನಂದ ಮತ್ತು ಜಗನಾಥರವರ ಜಮೀನು, ಪ-ಉರಬಾಗಿಲು ವೆಂಕಟಲಕ್ಷ್ಮಮ್ಮ , ಉ-ಜಿನ್ನಾಗರ ಗಡಿ, ದ-ದೇವಶೆಟ್ಟಿಹಳ್ಳಿ ಕೃಷ್ಣಮೂರ್ತಿರವರ ಜಮೀನು. ದಾವಾ ಆಸ್ತಿ ವಿಸ್ತೀರ್ಣ ಎರಡು ಎಕರೆ ಇರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ಬೇರೆ ಪ್ರಕರಣಗಳು ಇರುವುದಾಗಿ ನಮ್ಮ ತಂದೆ ಹೇಳಿದ್ದರು.

ಓ.ಎಸ್.೮೧೧-೨೦೦೪ ನೇದನ್ನು ನನ್ನ ತಂದೆ ಕೃಷ್ಣಪ್ಪ ರವರ ವಿರುದ್ದ ದಾಖಲಿಸಿದ್ದರು ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಇರುವ ಕುರಿತು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮೂಲತ: ಇನಾಮ ಜಮೀನು ಆಗಿರುವ ಕುರಿತು ನನಗೆ ಗೊತ್ತಿಲ್ಲ. ನಾನು ನಮ್ಮ ತಂದೆಗೆ ವಿಷಯ ತಿಳಿಸದೇ ಕರೆದುಕೊಂಡು ಹೋಗಿ ದಾನ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಅವಿದ್ಯಾವಂತರು ಇದ್ದು, ಅವರಿಗೆ ಬೇರೆ ಉದ್ದೇಶದಿಂದ ಕರೆದುಕೊಂಡು ಹೋಗಿ ದಾನ ಪತ್ರ ಮಾಡಿಸಿಕೊಂಡು ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರವನ್ನು ರದ್ದುಪಡಿಸುವಂತೆ ಕೋರಿ ನನ್ನ ತಂದೆ ಅಸಿಸ್ಟೆಂಟ್ ಕಮೀಷನರ್ ದೊಡ್ಡಬಳ್ಳಾಪುರದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಅರ್ಜಿ ವಜಾಗೊಂಡ ನಂತರ ಜಿಲ್ಲಾಧೀಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಆದೇಶದ ವಿರುದ್ದ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಚಾಲ್ತಿಯಲ್ಲಿದೆ ಎಂದರೆ ಸರಿ.

ದಾವಾ ಆಸ್ತಿಯಲ್ಲಿ ೧ ಮತ್ತು ೨ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ತಾನು ದೂರದ ಊರಲ್ಲಿ ಇರುವುದರಿಂದ ಅವರಿಗೆ ತಾನೇ ಉಳುಮೆ ಮಾಡುವಂತೆ ಹೇಳಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಖರ್ಚು ವೆಚ್ಚಗಳನ್ನು ತಾನೇ ನೋಡಿಕೊಳ್ಳುವುದಾಗಿ ಹೇಳಿರುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರ್ಚು ವೆಚ್ಚ ಕೊಟ್ಟಿರುವುದಕ್ಕೆ ದಾಖಲೆಗಳು ಇಲ್ಲ , ನಮ್ಮ ತಂದೆಯ ಕೈಯಲ್ಲಿ ಕೊಟ್ಟಿರುತ್ತೇನೆ. ಈಗ ದಾವಾ ಆಸ್ತಿಯಲ್ಲಿ ರಾಗಿ ಬೆಳೆಯನ್ನು ಕೊಯ್ಯಲು ಮಾಡಿದ್ದಾರೆ.

This is a True Copy of the Court Records Online. Authenticated @ districts.ecourtsindia.com/cnr/KABR500062662021/truecopy/order-4.pdf

www.ecourtsindia.com

ನನಗೆ ಮಕ್ಕಳು ಇಲ್ಲ ಎಂದರೆ ಸರಿ. ನನ್ನ ಅಣ್ಣನ ಮಗಳನ್ನೇ ಸಾಕುತ್ತಿದ್ದೇನೆ. ಅವರ ಹೆಸರು ಜ್ಯೋತಿ ಪ್ರಜ್ಞಾ. ನಾನು ನಂಜನಗೂಡು ನ್ಯಾಯಾಲಯದಲ್ಲಿ ಗಾರ್ಡಿಯನ್ ಶಿಫ್ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮಗು ಸಲ್ಲಿಸಿದ್ದಾಳೆ ಎನ್ನುತ್ತಾಳೆ. ಈಗ ನನಗೆ ತೋರಿಸುತ್ತಿರುವ ಜಿ.ಎನ್.ಡಬ್ಲು.ಸಿ ಅರ್ಜಿ ಅದೇ ಇರುತ್ತದೆ. ಅದನ್ನು ನಿ.ಡಿ.೧ ಎಂದು ಗುರುತಿಸಲಾಯಿತು. ಆದೇಶ ಪುಟದ ದೃಢೀಕೃತ ಪ್ರತಿ ಅದೇ ಇದ್ದು, ಅದನ್ನು ನಿ.ಡಿ.೨ ಎಂದು, ಮತ್ತು ತಕರಾರು ಅರ್ಜಿಯ ದೃಢೀಕೃತ ಪ್ರತಿ ಅದೇ ಇದ್ದು, ಅದನ್ನು ನಿ.ಡಿ.೩ ಎಂದು ಗುರುತಿಸಲಾಯಿತು.

ಈಗ ನನ್ನ ಮತ್ತು ನನ್ನ ತಂದೆಯ ಸಂಬಂಧ ಅಷ್ಟೊಂದು ಚೆನ್ನಾಗಿಲ್ಲ. ೨ನೇ ಪ್ರತಿವಾದಿ ನನ್ನ ಮತ್ತು ನನ್ನ ತಂದೆ ಯ ವಿರುದ್ಧ ಹಿರಿಯ ದಿವಾನಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ತಕರಾರು ಸಲ್ಲಿಸಿಲ್ಲ. ೨ನೇ ಪ್ರತಿವಾದಿ ಅವರು ಮಗು ನೋಡಲು ಬಂದಾಗ ಗಲಾಟೆ ಮಾಡಿದಾಗ ಅವರು ನನ್ನ ವಿರುದ್ಧ ದೂರು ನೀಡಿದ್ದಾರೆ ಎಂದರೆ ಸರಿ. ನಮ್ಮ ಅಣ್ಣ ನಮ್ಮ ಮನೆಯ ಹತ್ತಿರ ಬಂದಾಗ ಬೈದು ಗಲಾಟೆ ಮಾಡಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ಹೆಚ್.ಎ.ಆರ್ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ**
**ಹೊಸಕೋಟೆ.**

This is a True Copy of the Court Records Online. Authenticated @ districts.ecourtsindia.com/cnr/KABR500062662021/truecopy/order-4.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABR500062662021/truecopy/order-4.pdf